





ಅನಿವಾರ್ಯ.

ಫ್ರಿಂಜ್ ಕಟ್ ಈಗೀಗ ಗಂಡು ಮಕ್ಕಳು ಬಹುವಾಗಿ ಮೆಚ್ಚಿಕೊಳ್ಳುವ ಕೇಶ ವಿನ್ಯಾಸಗಳಲ್ಲಿ ಒಂದು. ಮಕ್ಕಳು ಹುಟ್ಟುಹಬ್ಬದ ಪಾರ್ಟಿಗಳಿಗೆ, ಗೆಟ್ ಟುಗೆದರ್‌ಗಳಿಗೆ, ಸಣ್ಣಪುಟ್ಟ ಕಾರ್ಯಕ್ರಮಗಳಿಗೆ ಹೋಗುವಾಗ ಇಂತಹ ಕೇಶವಿನ್ಯಾಸ ಇಷ್ಟಪಡುತ್ತಾರೆ.

ಪಾಂಪಡೋರ್ ಎಂಬುದು ಮತ್ತೊಂದು ಬಗೆಯ ಕೇಶವಿನ್ಯಾಸ. ತಲೆಯ ಮೇಲ್ಭಾಗದಲ್ಲಿ ದಟ್ಟವಾದ ಕೂದಲು ಇರಿಸಿ ಬದಿಯಲ್ಲಿ ತೆಳುವಾಗಿ ಟ್ರಿಮ್ ಮಾಡಿಸುವ ವಿನ್ಯಾಸವಿದು. ಇದೊಂದು ರೀತಿಯ ಅಂಡರ್‌ಕಟ್ ಕೂಡ ಆಗಿದೆ. ಕೆಲ ಮಕ್ಕಳು ಕೇಶಕ್ಕೆ ಕಂದು, ಕೆಂಪು, ನೀಲಿ, ಹಸುರು ಬಣ್ಣಗಳಲ್ಲಿ ಯಾವುದಾದರೊಂದು ಬಣ್ಣ ಹಾಕಿಸಿಕೊಂಡು ತಲೆಗೂದಲನ್ನು ಹೈಲೈಟ್ ಆಗುವಂತೆ ಮಾಡಿಸಿಕೊಳ್ಳುತ್ತಾರೆ. ಇದು ಸರಳವಾದ ವಿನ್ಯಾಸವಾಗಿದ್ದು, ಸಣ್ಣ ಮಕ್ಕಳಿಂದ ಹಿಡಿದು ಕಾಲೇಜು ಹುಡುಗರವರೆಗೂ ಎಲ್ಲರೂ ಈಗೀಗ ಇದೇ ರೀತಿಯ ವಿನ್ಯಾಸಕ್ಕೆ ಮಾರುಹೋಗಿದ್ದಾರೆ. ಇದಲ್ಲದೆ 'ಫಾಕ್ಸ್‌ಹಾಕ್' ಎಂಬುದು ಮತ್ತೊಂದು ಬಗೆಯ ಕೇಶವಿನ್ಯಾಸ. ಈ ವಿನ್ಯಾಸವನ್ನು ಸಣ್ಣ ಹುಡುಗರು, ಹದಿಹರೆಯದವರು ಹೆಚ್ಚು ಇಷ್ಟಪಡುತ್ತಿದ್ದಾರೆ.

## ಹೆಣ್ಣುಮಕ್ಕಳಿಗೆ ಪ್ರಿಯ

ಹುಡುಗರಿಗಿಂತಲೂ ಹುಡುಗಿಯರಿಗೆ ಕೇಶವಿನ್ಯಾಸವನ್ನು ಥರಾವರಿಯಾಗಿ ಮಾಡಬಹುದು. ಉದ್ದ ಕೂದಲು, ಗಿಡ್ಡ ಕೂದಲು, ದಪ್ಪ, ದಟ್ಟಕೂದಲು, ತೆಳ್ಳನೆಯ ಕೂದಲು, ಮಧ್ಯಮ ಗಾತ್ರದ ಕೂದಲು, ಕೆಂಚು ಕೂದಲು, ಕವಲು ಕೂದಲು... ಹೀಗೆ ತಲೆಗೂದಲ ಗಾತ್ರ, ಆಕಾರ ಹೇಗೆಯೇ ಇರಲಿ, ಇವುಗಳಿಗೆ ತಕ್ಕುದಾದ ಕೇಶವಿನ್ಯಾಸ ಮಾಡಿಸಿಕೊಂಡರೆ ಹುಡುಗಿಯರು ಚೆನ್ನಾಗಿಯೇ ಕಾಣುತ್ತಾರೆ. ಸಾಮಾನ್ಯವಾಗಿ ಹುಡುಗಿಯರಿಗೆ ಬಾಬ್ ಕಟ್ ಅತ್ಯಂತ ಸೂಕ್ತವಾದ ಕೇಶವಿನ್ಯಾಸ ಎನ್ನಬಹುದು. ಇದಲ್ಲದೆ ಟಾಪ್‌ನಾಟ್‌ಗಳು ಪುಟಾಣಿಗಳಿಗೆ ಚೆನ್ನಾಗಿ ಒಪ್ಪುತ್ತವೆ. ಪಿಗ್ಲೇಟ್, ಫಿಶ್‌ಟೇಲ್, ಟ್ವಿಸ್ಟೆಡ್ ಪೋನಿಟೇಲ್ ಹೆಣ್ಣುಮಕ್ಕಳಿಗೆ ಸೂಕ್ತವಾದವು. ಜೊತೆಗೆ ಪಿಕ್ಸಿ ಕಟ್, ಬ್ಲಂಟ್ ಕಟ್, ಯು ಕಟ್, ವಿ ಕಟ್ ಯುವತಿಯರಿಗೆ ಚೆನ್ನಾಗಿ ಕಾಣುತ್ತದೆ.

ಫ್ರೆಂಚ್ ಪ್ಲೀಟ್ ಕೆಲಕಾಲ ಫ್ಯಾಷನ್ ಪ್ರಪಂಚದಲ್ಲಿ ಮನೆಮಾತಾಗಿ ಕ್ರಮೇಣ ಔಟ್‌ಡೇಟೆಡ್ ಎನಿಸಿಬಿಟ್ಟಿತ್ತು. ಇದೀಗ ಮತ್ತೆ ಈ ಶೈಲಿ ಜನಪ್ರಿಯವಾಗುತ್ತಿದೆ. ಇದರ ಜೊತೆಗೆ ಕಡಿಮೆ ಕೂದಲು ಹಾಗೂ ಉದ್ದ ಕೂದಲಿರುವ ಮಹಿಳೆಯರು ಮೆಸ್ಸಿನಾಟ್, ಮೆಸ್ಸಿಜಡೆ, ಫಿಶ್‌ಟೇಲ್ ಜಡೆ, ಟ್ವಿಸ್ಟ್ ಜಡೆ, ಬಾಕ್ಸ್ ಟ್ವಿಸ್ಟ್ ಜಡೆಯ ಕಡೆಗೂ ಚಿತ್ತಹರಿಸಿದ್ದಾರೆ.

## ಜಡೆಗೆ ಹೂವಿನಲಂಕಾರ

'ಹೂವಿನಿಂದ ಅಲಂಕರಿಸಿದ ಜಡೆ ಎವರ್‌ಗ್ರೀನ್ ಆಗಿ ಫ್ಯಾಷನ್ ಪ್ರಪಂಚದಲ್ಲಿ ನೆಲೆ ನಿಂತಿದೆ. ಮೊಗ್ಗಿನ ಜಡೆ ಹಿಂದಿನಿಂದಲೂ ಫ್ಯಾಷನ್ ಆಗಿಯೇ ಇದ್ದ ಕೇಶಶೈಲಿ. ಇದನ್ನು ಸಾಮಾನ್ಯವಾಗಿ ಎಲ್ಲರೂ ಇಷ್ಟಪಡುತ್ತಾರೆ. ಸಾಂಪ್ರದಾಯಿಕ ಮದುವೆಗಳಲ್ಲಿ ಇದು ಪರಂಪರೆ ಆದರೂ ಇಂದೂ ಬಹುತೇಕರು ಮದುವೆ ಸಮಾರಂಭಕ್ಕಾಗಿ ಮೊಗ್ಗಿನ ದಂಡೆಯ ಜಡೆಯನ್ನೇ ಬಯಸುತ್ತಾರೆ. ಇತರ ಹೂವುಗಳಲ್ಲಿ ಜಪಾನಿ ಶೈಲಿಯ ಇಕೆಬಾನ ಹೂವುಗಳ ಅಲಂಕಾರದ ವಿನ್ಯಾಸ ಇಂದಿನ ಫ್ಯಾಷನ್ ಆಗಿದೆ. 'ಮೆಸ್ಸಿ ನಾಟ್, ಮೆಸ್ಸಿ ಜಡೆ'ಯಲ್ಲಿಯೂ ಹೂವಿನ ಅಲಂಕಾರ ಚೆನ್ನಾಗಿ ಕಾಣುತ್ತದೆ. ಕೆಲವು ಸಲ ಆಕರ್ಷಕವಾದ ಕೃತಕ ಹೂವುಗಳಿಂದಲೂ ಅಲಂಕಾರ ಮಾಡುತ್ತೇವೆ. ಇವುಗಳು ನೈಜ ಹೂವುಗಳಂತೆಯೇ ಕಾಣುತ್ತವೆ' ಎಂದು ಹೇಳುತ್ತಾರೆ ಬೆಂಗಳೂರಿನ ಕೇಶ ವಿನ್ಯಾಸಕಿ ಹಾಗೂ ಸೌಂದರ್ಯತಜ್ಞೆ ಉಮಾ ಜಯಕುಮಾರ್.

'ಉದ್ದ ಕೂದಲು ಇದ್ದವರಿಗೆ ಕೇಶಶೈಲಿಯಲ್ಲೂ ವೈವಿಧ್ಯ ಮಾಡಬಹುದು. ಹತ್ತು ಹಲವು ರೀತಿಯಲ್ಲಿ ವಿನ್ಯಾಸ ಮಾಡಿಕೊಳ್ಳಲು ಅನುಕೂಲವಾಗುತ್ತದೆ. ನೀಳಕೂದಲನ್ನು ಸುಂದರವಾಗಿ ಸುತ್ತಿ ಾಲಂಕಾರಿಕ ಕ್ಲಿಪ್ ಹಾಕಿಕೊಂಡರೆ ನಿಮಿಷದಲ್ಲಿ ಹತ್ತಾರು ಕೇಶವಿನ್ಯಾಸ ಮಾಡಿ ಮುಗಿಸಿಬಿಡಬಹುದು. ಇದರ ಮೇಲೆ ಮುತ್ತು, ಹವಳಗಳನ್ನು ಒಂದೊಂದಾಗಿ ಇಡುತ್ತಾ ಬಂದರೆ ಕೇಶಶೈಲಿ ಚೆನ್ನಾಗಿ ಕಾಣುತ್ತದೆ. ಜೊತೆಗೆ ಮಲ್ಲಿಗೆ, ಗುಲಾಬಿ ಎಸಳುಗಳನ್ನು ಪೋಣಿಸಿದರೂ ಕೇಶಶೈಲಿ ಸಖತ್ ಆಗಿರುತ್ತದೆ. ಫ್ರೆಂಚ್ ಮಾದರಿಯ ಕೇಶ ಶೈಲಿ ಕೂಡ ಉದ್ದ ಕೂದಲಿನವರಿಗೆ ಚೆನ್ನಾಗಿ ಒಪ್ಪುತ್ತದೆ. ನೀಳಕೂದಲನ್ನು ಎಳೆ ಎಳೆಯಾಗಿ ಬಿಡಿಸಿ ಹೆಣೆದು ಮಾಡುವ ಕೇಶ ವಿನ್ಯಾಸ ಇಡೀ ದಿನ ಎಷ್ಟೇ ಚಟುವಟಿಕೆಗಳಲ್ಲಿ ತೊಡಗಿದ್ದರೂ ಅಲ್ಲಾಡದೆ ಹಾಗೇ ಇರುತ್ತದೆ' ಎಂದು ಹೇಳುತ್ತಾರೆ ಅವರು.

'ಪುಟ್ಟ ಹೆಣ್ಣುಮಕ್ಕಳಿಗೆ ಕೇಶ ವಿನ್ಯಾಸ ಮಾಡಿಸಿಕೊಳ್ಳುವುದರಲ್ಲಿ ಆಸಕ್ತಿ. ತಾಯಂದಿರೂ ಇದಕ್ಕೆ ಪ್ರೋತ್ಸಾಹ ಕೊಡುತ್ತಿರುವುದರಿಂದ ವಿವಿಧ ರೀತಿಯ ಕೇಶ ವಿನ್ಯಾಸ ಮಾಡಿಸಿಕೊಂಡು ಹುಡುಗಿಯರು ಫ್ಯಾಷನ್ ಮೆರೆಯುತ್ತಿದ್ದಾರೆ. 'ಮಕ್ಕಳಿಗಾಗಿಯೇ ಬಾಬ್ ಕಟ್, ಲೇಯರ್ ಕಟ್, ಫ್ರೆಂಚ್ ಕಟ್, ಸ್ಟೆಪ್ ಕಟ್, ರಾಣಿ ಮುಖರ್ಜಿ ಕಟ್ ಮುಂತಾದ ಶೈಲಿಗಳಲ್ಲಿ ಕೇಶ ವಿನ್ಯಾಸ ಮಾಡುತ್ತೇವೆ, ಮಕ್ಕಳೇ ಯೂಟ್ಯೂಬ್ ನೋಡಿಕೊಂಡು ಇಂಥದ್ದೇ ಕಟ್ ಮಾಡಿಸಿಕೊಡಿ ಅಂತ ಪಾರ್ಲರ್‌ಗೆ ಬರುತ್ತಾರೆ. ಅವರ ಅಭಿಲಾಷೆಯಂತೆ ಹಾಗೂ ಮಕ್ಕಳ ತಲೆಗೂದಲ ಮಾದರಿ ಆಧರಿಸಿ ಹೇರ್‌ಕಟ್ ಮಾಡ್ತೀನಿ. ಕೇಶ ವಿನ್ಯಾಸಗಳಲ್ಲದೆ ಇನ್‌ಸ್ಟಂಟ್ ಆಗಿರುವ ವಿನ್ಯಾಸಗಳನ್ನೂ ಮಾಡ್ತೀನಿ. ಮುಖ್ಯವಾಗಿ ಡ್ರೈಯರ್ ಬಳಸಿ ಸೆಟ್ ಮಾಡುವಂಥ ಬ್ಲೊ ಡ್ರೈ, ಹಂಪ್ಸ್, ಟ್ವಿಸ್ಟೆಡ್ ರೋಪ್, ಫ್ರೆಂಚ್ ಪ್ಲೀಟ್ಸ್... ಇವೇ ಮುಂತಾದ ವಿನ್ಯಾಸಗಳನ್ನು ಮಾಡ್ತೀನಿ. ಸುಮಾರು 10ರಿಂದ 12 ವರ್ಷದ ಹುಡುಗಿಯರಿಗೆ ಈ ಸ್ಟೈಲ್ ಚೆನ್ನಾಗಿ ಕಾಣುತ್ತದೆ' ಎನ್ನುತ್ತಾರೆ ಈ ಸೌಂದರ್ಯತಜ್ಞೆ.